ಕಥೆ

# ಮೇರುನಟನ ಕೈ ಜಾರಿದ ರಾಜಗುರು



**ಅನುಪಮಾ ಪ್ರಸಾದ್**

ಕಲೆ: ವಿಶ್ವನಾಥ್ ಎ.ಎಸ್.

'ಕಟ್ ಕಟ್ ಕಟ್' ಎಂದ ಡೈರಕ್ಟರ್ ಶ್ರೀನಿ ಆತಂಕದಿಂದ ಗುರುಮೂರ್ತಿ ಬಳಿಗೆ ಓಡೋಡಿ ಬಂದ. ಇಬ್ಬರೂ ಪರಸ್ಪರ ನೋಡಿಕೊಂಡರು. ಬೆಳಗಿಂದ ಇದು ಎಷ್ಟನೇ ಬಾರಿ ರಿಟೇಕ್ ಎಂಬ ಲೆಕ್ಕವೇ ತಪ್ಪಿತ್ತು. ನಿರ್ದೇಶಕನ ಕಣ್ಣಲ್ಲಿ ಹೀಗೇಕೆ ಎಂಬ ಪ್ರಶ್ನೆ. ನಟನ ಕಣ್ಣಲ್ಲಿ ಏನೆಂದು ಹೇಳಿಕೊಳ್ಳಲಾಗದ ಅಸಹಾಯಕತೆ.

'ಆ ವಚನವನ್ನು ಇನ್ನೊಮ್ಮೆ ಓದಬೇಕು ಅನಿಸ್ತಿದೆ ಶೀನಿ' ತಗ್ಗಿದ ಧ್ವನಿಯಲ್ಲಿ ನಿಧಾನವಾಗಿ ಹೇಳಿದ ಗುರುಮೂರ್ತಿ.

ಗುರುಮೂರ್ತಿ ಮೇರು ನಟನೆಂಬ ಬಿರುದಾಂಕಿತನಾಗಿದ್ದುದರ ಹಿಂದೆ ಯಾವುದೇ ಪರಂಪರೆಯ ಬಲವಿರಲಿಲ್ಲ. ಸ್ವಯಂ ಕಲಿಕೆಯ ಶ್ರದ್ಧೆ, ದುಡಿಮೆ, ಗ್ರಹಿಕೆ ಅವನನ್ನು ಮೇರುನಟನನ್ನಾಗಿಸಿದ್ದು. ಆದರೆ, ಗುರುಮೂರ್ತಿಯ ಪ್ರಕಾರ ದುಡಿಮೆ, ಕಲಿಕೆ ಎಲ್ಲರೂ ಮಾಡುತ್ತಾರೆ. ಗ್ರಹಿಕೆ ಕೈ ಹಿಡಿಯಬೇಕೆಂದರೆ ಅದೃಷ್ಟ ಬೇಕು. ಆ ಅದೃಷ್ಟವೇ ತನ್ನ ಬೆನ್ನೆಲುಬು ಎನ್ನುತ್ತಿದ್ದ. ಅಂತಹ ಗುರುಮೂರ್ತಿ ಈ ದಿನ ಬೆಳಗ್ಗಿನಿಂದ ಲೆಕ್ಕವಿಲ್ಲದಷ್ಟು ರಿಟೇಕ್ ತೆಗೆದುಕೊಂಡರೂ ಎಲ್ಲೋ ಏನೋ ತಪ್ಪಾಗುತ್ತಿತ್ತು. ಸಿನಿಮಾ ಶೂಟಿಂಗ್ ಅಕ್ಷರಶಃ ಕೊನೆಯ ಹಂತದಲ್ಲಿತ್ತು. ಇದು ಗುರುಮೂರ್ತಿಯ ಅತ್ಯಂತ ಮಹತ್ವಾಕಾಂಕ್ಷೆಯ ಸಿನಿಮಾ. ತನ್ನೊಳಗಿನ ಕಲಾವಿದನಿಗೆ ತಾನೇ ಸವಾಲೊಡ್ಡುವ ಐತಿಹಾಸಿಕ ಪಾತ್ರ ಬೇಕೆಂದು, ಅದು ಮಾಸ್ ಹಾಗು ಕ್ಲಾಸ್ ಇರಬೇಕೆಂದೂ, ಅದಕ್ಕೊಂದು ಸಾಮಾಜಿಕ, ಸಾಂಸ್ಕೃತಿಕ ಹಿರಿಮೆಯೂ ಇರಬೇಕೆಂದು ಹಲವು ಮಹತ್ತರಗಳನ್ನು ಸಾಧಿಸಿದ ನಿರ್ದೇಶಕ ಶೀನಿಯ ಬಳಿ ಬೇಡಿಕೆ ಇಟ್ಟು ವರ್ಷಗಳೇ ಕಳೆದಿತ್ತು. ಶೀನಿಗೂ ಗುರುಮೂರ್ತಿಯಂತಹ ಮೇರುನಟನಿಗಾಗಿ ಅದ್ಭುತ ಚಿತ್ರಕಥೆ ಮಾಡಬೇಕೆಂಬ ಆಸೆ ಇತ್ತು. ಇಬ್ಬರ ಆಸೆಯೂ ಸೇರಿ ಬಂದು, ಅದಕ್ಕೆ ತಕ್ಕಂತೆ ಹುಡುಕಾಟ ನಡೆಸಿ ಕೊನೆಗೆ ಅವನನ್ನು ಪರೀಕ್ಷೆಗೊಡ್ಡಿಯೇ ತೀರಬೇಕೆಂಬಂತೆ ಬಸವ ಬಿಜ್ಜಳರ ಕಥೆ ಬರೆದು ತಂದಿದ್ದ. ಜೊತೆಗೆ ಬಸವಣ್ಣನನ್ನು ಅಂತರ್ಗತ ಮಾಡಿಕೊಳ್ಳಲು ಪ್ರಮುಖ ವಿದ್ವಾಂಸರುಗಳು ಸಂಗ್ರಹ ಮಾಡಿದ ಬಸವಣ್ಣನ ವಚನಗಳ ಸಂಗ್ರಹವನ್ನು ತಂದುಕೊಟ್ಟಿದ್ದ. ಚಿತ್ರಕಥೆಯ ಪ್ರತಿ ಹಂತದಲ್ಲಿ ಇಬ್ಬರೂ ಕುಳಿತು ಚರ್ಚಿಸುತ್ತಿದ್ದರು. ಬಸವಣ್ಣ ಬಿಜ್ಜಳರ ಅಂತರಂಗದ ಗೆಳೆತನ, ಬೌದ್ಧಿಕ ಸಂಘರ್ಷ, ಅಹಂಕಾರಗಳಂತಹ ಅತಿ ಸೂಕ್ಷ್ಮ ಸಂಗತಿಗಳಿಗೆ ಪ್ರಾಮುಖ್ಯ ಕೊಟ್ಟಿದ್ದರು. ಬರೆಯುತ್ತ... ಓದುತ್ತ... ಬರೆಯುತ್ತ ಎರಡು ವರ್ಷಗಳುರುಳಿದ್ದವು. ಗುರುಮೂರ್ತಿ ಈಗೀಗ ಏನೇ ಮಾತಾಡಿದರೂ ಅದರಲ್ಲಿ ವಚನದ ಸಾಲು ನುಸುಳುತ್ತಿತ್ತು. ಇನ್ನೇನು ಮುಂದಿನ ತಿಂಗಳಲ್ಲಿ ಶೂಟಿಂಗಿಗೆ ಹೊರಡುವುದು ಅನ್ನುವ ಹೊತ್ತಲ್ಲಿ ಗುರುಮೂರ್ತಿಗೆ, ಈ ಕಾಲದ ರಾಜಕೀಯ ಆಯಾಮವನ್ನೂ ಇಟ್ಟುಕೊಂಡು ಚಿತ್ರಕಥೆಯನ್ನು ಮುರಿದು ಕಟ್ಟಿದರೆ ಸಕತ್ತಾಗಿರುತ್ತದೆ ಅನಿಸಿತು.